1	2	3	4	5	6
242.	ಬಿಲ್‌ವಡೇರಕೊಪ್ಪ	121–04	3–18	12–00	–
243.	ಇಟ್ಟಿಗೀಹಳ್ಳಿ	–	571–18	3–29	–
244.	ಹೊಡ್ಡಮಲ್ಲಿ	141–10	864–18	6–32	–
245.	ಚಿಟ್ಟೇಹಾಳೆ	327–32	384–29	5–18	0–12
246.	ಮಳಲ್‌ಕೊಪ್ಪ	–	286–08	5–13	–
247.	ಮಂಜರೀಕೊಪ್ಪ	5415–10	1647–10	–	–
248.	ಮಲೇಶಂಕರ	433–26	696–18	0–25	–
249.	ಮಲೇಶಂಕರ ಎಸ್.ಎಫ್	–	4793–24	–	–
250.	ಅಡಗಡಿ	–	531–03	12–36	23–12
251.	ಸೊಡೂರು	61–22	921–10	74–03	301–04
		10660.25	**26851.15**	**1720.26**	**1971.18**

ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಮೇಲು ಸೇತುವೆ ನಿರ್ಮಾಣ

3282 (3309) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರ ವ್ಯಪ್ತಿಯಲ್ಲಿ ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾಗಿರುವ ಮೇಲು ಸೇತುವೆ ಯೋಜನೆಗಳು ಯಾವ ಹಂತದಲ್ಲಿವೆ; ರೈಲ್ವೆ ಇಲಾಖೆಯಿಂದ ಅನುಮತಿ ಪಡೆಯಲಾಗಿದೆಯೆ;

ಆ) ಈ ಯೋಜನೆಗೆ ಕೇಂದ್ರ ಸರ್ಕಾರದ ವತಿಯಿಂದ ಎಷ್ಟು ಅನುದಾನ ನೀಡುವ ಪ್ರಸ್ತಾವನೆ ಇರುತ್ತದೆ;

ಇ) ಈ ಯೋಜನೆ ಯಾವಾಗ ಪ್ರಾರಂಭವಾಗುವುದು;

ಈ) ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ಯೋಜನೆಯಡಿ ಶಿವಮೊಗ್ಗ ನಗರಸಭೆ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿಗೆ ಎಷ್ಟು ಕಿಮೀ. ರಸ್ತೆ ಆಯ್ಕೆಮಾಡಿಕೊಳ್ಳಲಾಗಿರುತ್ತದೆ;

ಉ) ಈ ಯೋಜನೆಯ ಉದ್ದೇಶಿತ ವೆಚ್ಚವೆಷ್ಟು; ಇದು ಯಾವ ಹಂತದಲ್ಲಿರುತ್ತದೆ; ಯಾವಾಗ ಪೂರ್ಣಗೊಳ್ಳುವುದು

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಶಿವಮೊಗ್ಗ ನಗರದಲ್ಲಿ ಲೆವಲ್ ಕ್ರಾಸಿಂಗ್ ನಂ.48 ಮತ್ತು 49 ರಲ್ಲಿ ಮೇಲು ಸೇತುವೆಗಳನ್ನು (ROB) ನಿರ್ಮಿಸುವ ಕಾಮಗಾರಿಗಳು ರೈಲ್ವೆ ಮಂಡಳಿಯಿಂದ ಪ್ರಕಟವಾಗುವ ಪಿಂಕ್ ಪುಸ್ತಕದಲ್ಲಿ 2003–04 ರ ಕಾಮಗಾರಿಗಳ ವೆಚ್ಚ ಪಾಲುದಾರಿಕೆ ಆಧಾರದ ಮೇಲೆ ಕೈಗೆತ್ತಿಕೊಳ್ಳುವ ರೈಲ್ವೆ ಇಲಾಖೆಯಿಂದ ಮಂಜೂರಾದ ಕಾಮಗಾರಿಗಳಲ್ಲಿ ಸೇರಿವೆ. ಈ ಪೈಕಿ 2003–04 ರಲ್ಲಿ ಆದ್ಯತೆ ಮೇರೆಗೆ ರಾಜ್ಯದ ಪಾಲುದಾರಿಕೆ ವೆಚ್ಚದಲ್ಲಿ ನಿರ್ಮಿಸಲಾಗುವ ROB/RUB ಗಳಲ್ಲಿ ಎಲ್.ಸಿ.ನಂ. 48 ಸೇರಿರುತ್ತದೆ.

ಆ) ಈ ಯೋಜನೆಗೆ ಒಟ್ಟು ಅಂದಾಜು ವೆಚ್ಚ ರೂ. 16.96 ಕೋಟಿಗಳಾಗುವುದಿದ್ದು, ರಾಜ್ಯ ಸರ್ಕಾರದ ವೆಚ್ಚದ ಪಾಲು ರೂ. 8.48 ಕೋಟಿಗಳಾಗಿರುತ್ತದೆ.

ಇ) ಮೈ: ರೈಟ್ಸ್ ಸಂಸ್ಥೆಯು ಈ ಮೇಲು ಸೇತುವೆಗಳ ವಿನ್ಯಾಸಗಳನ್ನು ಹಾಗೂ ಅಂದಾಜು ಪಟ್ಟಿಯನ್ನು ತಯಾರಿಸಿ ರೈಲ್ವೆ ಇಲಾಖೆಗೆ ಸಲ್ಲಿಸಿದ್ದು, ಸದರಿ ವಿನ್ಯಾಸಗಳು ರೈಲ್ವೆ ಇಲಾಖೆಯ ಪರಿಶೀಲನೆಯಲ್ಲಿದೆ. ಈ ಯೋಜನೆಗಳ ಪ್ರಾರಂಭದ ದಿನಾಂಕವನ್ನು ಇನ್ನೂ ಗೊತ್ತುಪಡಿಸಿರುವುದಿಲ್ಲ.

ಈ) ಶಿವಮೊಗ್ಗ ನಗರ ಸಭಾ ವ್ಯಾಪ್ತಿಯಲ್ಲ 3.221 ಕಿಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಗಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಉ) ಉದ್ದೇಶಿತ ಅಂದಾಜು ವೆಚ್ಚ ರೂ. 260 ಲಕ್ಷಗಳು ಸುಮಾರು 1.921 ಕಿಮೀ. ಉದ್ದದ ರಸ್ತೆಯನ್ನು ಪೂರ್ಣಗೊಳಿಸಲಾಗಿದ್ದು, ಉಳಿದ ಭಾಗ ಪ್ರಗತಿಯಲ್ಲಿದೆ.

ಆಗಸ್ಟ್ 2003 ರ ಕೊನೆಯ ವೇಳೆಗೆ ಪೂರ್ಣ ಗೊಳಿಸಲಾಗುವುದು.

ಶಿವಮೊಗ್ಗ ತಾಲ್ಲೂಕು ಕಛೇರಿ ಕಟ್ಟಡ ನಿರ್ಮಾಣ ಯೋಜನೆ

3283 (3310) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ನೂತನ ತಾಲ್ಲೂಕು ಕಛೇರಿ ಕಟ್ಟಡ ನಿರ್ಮಾಣ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಈ ಯೋಜನಾ ಕಾಮಗಾರಿ ಯಾವಾಗ ಪ್ರಾರಂಭವಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಹೌದು.

ಆ) ಸಂಪನ್ಮೂಲ ಕ್ರೋಢೀಕರಿಸಿದ ನಂತರ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

ರಾಜ್ಯದಲ್ಲಿ ಬಾಲ ಕಾರ್ಮಿಕರ ಕಲ್ಯಾಣ ಯೋಜನೆ

3285 (3767) : ಶ್ರೀ ಚೆನ್ನಿಗಪ್ಪ ಸಿ. (ಕೊರಟಗೆರೆ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಾಲ ಕಾರ್ಮಿಕರಾಗಿ ದುಡಿಯುತ್ತಿರುವ ಬಡ ಮಕ್ಕಳ ಸಂಖ್ಯೆ ಎಷ್ಟು; ಯಾವ ಯಾವ ಕಾರ್ಖಾನೆ, ಹೋಟೆಲ್, ಇತರೇ ಸಂಸ್ಥೆಗಳಲ್ಲಿ ಬಾಲ ಕಾರ್ಮಿಕರು ದುಡಿಯುತ್ತಿರುವವರು;

ಆ) ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವ ಕಾರ್ಖಾನೆ, ಹೋಟೆಲ್, ಇತರೇ ಸಂಸ್ಥೆಗಳ ಮಾಲೀಕರ ವಿರುದ್ಧ ಸರ್ಕಾರವು ಇದುವರೆವಿಗೂ ಕೈಗೊಂಡಿರುವ ಕ್ರಮವೇನು;

ಇ) ಈ ಬಾಲ ಕಾರ್ಮಿಕರ ಕಲ್ಯಾಣಕ್ಕೆ ಸರ್ಕಾರವು ಯಾವ ಯೋಜನೆಯನ್ನು ಹಮ್ಮಿಕೊಂಡಿದೆ.

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) ರಾಜ್ಯದಲ್ಲಿ ದುಡಿಯುತ್ತಿರುವ ಬಾಲ ಕಾರ್ಮಿಕರ ಸಂಖ್ಯೆ : 39,300

ಅಪಾಯಕಾರಿ ಉದ್ದಿಮೆಯಲ್ಲಿ 1,112 ಮಕ್ಕಳು ಅಪಾಯಕಾರಿ ಅಲ್ಲದ 32,188 ಮಕ್ಕಳು ಉದ್ದಿಮೆಯಲ್ಲಿ

ಆ) ತಪ್ಪಿತಸ್ಥ ಮಾಲೀಕರುಗಳ ವಿರುದ್ಧ ಬಾಲ ಕಾರ್ಮಿಕ ಕಾಯ್ದೆಯಡಿಯಲ್ಲಿ ಮೊಕದ್ದಮೆಗಳನ್ನು ಹೂಡಲಗಿದೆ. ವಿವರ ಕೆಳಗಿನಂತಿದೆ:

ತಪಾಸಣೆಗಳ ಸಂಖ್ಯೆ	ಮೊಕದ್ದಮೆಗಳ ಸಂಖ್ಯೆ	ಶಿಕ್ಷೆ ವಿಧಿಸಿದ ಪ್ರಕರಣ
58,045	1,265	273